# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್.ರಸ್ತೆ,ತುಮಕೂರು-572 103☏:0816 - 2255650,2273511 ಫ್ಯಾಕ್ಸ್ :0816-2270719


ಸಂಖ್ಯೆ:ತು.ವಿ.: ಪ.ವಿ.:/2023-24 ದಿನಾಂಕ: 12.01.2024

**"ಸುತ್ತೋಲೆ"**

**ವಿಷಯ: ಅಂಕಪಟ್ಟಿಯನ್ನು ಮುದ್ರಿಸುವ ಸಂಬಂಧ ಯು.ಯು.ಸಿ.ಎಂ.ಎಸ್. ತಂತ್ರಾಂಶದಲ್ಲಿ ವಿದ್ಯಾರ್ಥಿಗಳು ಸಮರ್ಪಕ ಭಾವಚಿತ್ರವನ್ನು ಅಪ್‌ಲೋಡ್ ಮಾಡುವ ಕುರಿತು**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಯು.ಯು.ಸಿ.ಎಂ.ಎಸ್. ತಂತ್ರಾಂಶದ ಮೂಲಕ ಪ್ರವೇಶ ಪಡೆದ ವಿದ್ಯಾರ್ಥಿಗಳ ಮುದ್ರಣಗೊಳ್ಳುವ ಅಂಕಪಟ್ಟಿಯ ನಮೂನೆಯು ಅಂತಿಮಗೊಳ್ಳುವ ಹಂತದಲ್ಲಿದ್ದು, ಅಂಕಪಟ್ಟಿಯಲ್ಲಿ ಪ್ರತಿ ವಿದ್ಯಾರ್ಥಿಯ ಭಾವಚಿತ್ರವು ಕಡ್ಡಾಯವಾಗಿ ಮುದ್ರಣಗೊಳ್ಳಲಿದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಘಟಕ/ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರು/ ಯು.ಯು.ಸಿ.ಎಂ.ಎಸ್. ನೋಡಲ್ ಅಧಿಕಾರಿಗಳು ಹಾಗೂ ವಿವಿಧ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರು/ ಸಂಯೋಜಕರು ಆದ್ಯತೆಯ ಮೇರೆಗೆ ಕೆಳಕಂಡಂತೆ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ:

1. ಯು.ಯು.ಸಿ.ಎಂ.ಎಸ್. ನೋಡಲ್ ಅಧಿಕಾರಿಗಳು ಅಥವಾ ಸಂಬಂಧಪಟ್ಟ ಅಧಿಕಾರಿಗಳು ತಮ್ಮ ವಿಭಾಗದ/ ಕಾಲೇಜಿನ ಅಡ್ಮಿನ್ ಖಾತೆಗೆ ಲಾಗಿನ್ ಮಾಡಿ, Reports > Student Status Report of Photo and Signature ಆಯ್ಕೆ ಬಳಸಿ ಪ್ರತಿ ವಿದ್ಯಾರ್ಥಿಯ ಭಾವಚಿತ್ರವನ್ನು ಪರಿಶೀಲಿಸುವುದು.
2. ಭಾವಚಿತ್ರವು ಸ್ಟುಡಿಯೋದಲ್ಲಿ ತೆಗೆಸಿದ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವಾಗಿದ್ದು, ಸ್ಪಷ್ಟತೆಯಿಂದ ಕೂಡಿದೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.
3. ಓರೆ-ಕೋರೆಯಾಗಿರುವ, ಮಸುಕಾಗಿರುವ, ಅಸ್ಪಷ್ಟವಾಗಿರುವ, ಹೊರಗಿನ ಪರಿಸರದಲ್ಲಿ ತೆಗೆದ ಭಾವಚಿತ್ರಗಳಾಗಲೀ ಹಾಗೂ ಸೆಲ್ಫೀ ಭಾವಚಿತ್ರಗಳನ್ನಾಗಲೀ ಅಪ್‌ಲೋಡ್ ಮಾಡುವಂತಿಲ್ಲ.
4. ಈಗಾಗಲೇ ಅಪ್‌ಲೋಡ್ ಮಾಡಿರುವ ಭಾವಚಿತ್ರವು ಸಮರ್ಪಕವಾಗಿರದಿದ್ದಲ್ಲಿ, ಅಂತಹ ವಿದ್ಯಾರ್ಥಿಗಳು ಸಮರ್ಪಕವಾದ ಭಾವಚಿತ್ರವನ್ನು ತಮ್ಮ ಯು.ಯು.ಸಿ.ಎಂ.ಎಸ್. ಖಾತೆಯಲ್ಲಿ ಅಪ್‌ಲೋಡ್ ಮಾಡುವಂತೆ ಪ್ರಾಂಶುಪಾಲರು/ಯು.ಯು.ಸಿ.ಎಂ.ಎಸ್. ನೋಡಲ್ ಅಧಿಕಾರಿಗಳು ಅಥವಾ ಸಂಬಂಧಪಟ್ಟ ಅಧಿಕಾರಿಗಳು ಮಾಹಿತಿ ನೀಡುವುದು.
5. ಭಾವಚಿತ್ರವನ್ನು ಅಪ್‌ಲೋಡ್ ಮಾಡಲು ವಿದ್ಯಾರ್ಥಿಯು ತನ್ನ ಯು.ಯು.ಸಿ.ಎಂ.ಎಸ್. ಖಾತೆಗೆ (ನೋಂದಣಿ ಸಂಖ್ಯೆ ಹಾಗೂ ಪಾಸ್‌ವರ್ಡ್ ಬಳಸಿ) ಲಾಗಿನ್ ಮಾಡಿ, Upload My Photo and Signature ಆಯ್ಕೆ ಬಳಸಿ ಸಮರ್ಪಕವಾದ ಭಾವಚಿತ್ರವನ್ನು ಅಪ್‌ಲೋಡ್ ಮಾಡುವುದು.

**ಕುಲಸಚಿವರು (ಪರೀಕ್ಷಾಂಗ)**

**ಇವರಿಗೆ**

1. **ಅಧ್ಯಕ್ಷರು/ ಸಂಯೋಜಕರು, ಸ್ನಾತಕೋತ್ತರ ವಿಭಾಗಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು**
2. **ಎಲ್ಲಾ ಪ್ರಾಂಶುಪಾಲರು/ ಯುಯುಸಿಎಂಎಸ್ ನೋಡಲ್ ಅಧಿಕಾರಿಗಳು ಸ್ನಾತಕ ಮತ್ತು ಸ್ನಾತಕ ಶಿಕ್ಷಣ ಸಂಯೋಜಿತ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು**

**ಪ್ರತಿ :**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು
2. ಮಾನ್ಯ ಕುಲಪತಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
3. ಕಚೇರಿ ಪ್ರತಿ